ಹುಕ್ಕೇರಿ ತಾಲ್ಲೂಕಿನಲ್ಲಿ ಜೆ.ಆರ್.ವೈ. 80% ಜೆ.ಆರ್.ವೈ. 20% ಯೋಜನೆಯಲ್ಲಿ ತೆಗೆದುಕೊಂಡ ಕಾಮಗಾರಿ ಕೆಲಸ

478 - ಶ್ರೀ ಉಮೇಶ.ವಿ. ಕತ್ತಿ (ಹುಕ್ಕೇರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಜೆ.ಆರ್.ವೈ. 80% ಜೆ.ಆರ್.ವೈ. 20% ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ವೆಚ್ಚವೆಷ್ಟು;

ಆ) ಆ ಕಾರ್ಯಗಳು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಅದನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 94ನೇ ಫೆಬ್ರವರಿ ಅಂತ್ಯದವರೆಗೆ ಜೆ.ಆರ್.ವೈ. 80% ಮತ್ತು 20% ರಲ್ಲಿ ಕ್ರಮವಾಗಿ ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

80 %	:	ರೂ. 37.217 ಲಕ್ಷ
20%	:	ರೂ. 8.437 ಲಕ್ಷ

ಆ) ಇಲ್ಲ.

ಇ) ಪ್ರಶ್ನೆ (ಅ)ಗೆ ಉತ್ತರಿಸಿರುವಂತೆ ಇದು ಉದ್ಭವಿಸುವುದಿಲ್ಲ.

ಬೆಂಗಳೂರು ಗಾಯತ್ರಿನಗರ ಗೃಹ ನಿರ್ಮಾಣ ಸಂಘ ಕುರಿತು

436 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಗಾಯತ್ರಿನಗರ ಗೃಹನಿರ್ಮಾಣ ಸಹಕಾರ ಸಂಘದವರು ಅದರ ಸದಸ್ಯರಲ್ಲದವರಿಗೆ ನಿವೇಶನಗಳನ್ನು ಹಂಚಿದ್ದಾರೆ ಎಂಬ ಬಗ್ಗೆ ಸದಸ್ಯರಿಂದ ದೂರುಗಳು ಸರ್ಕಾರಕ್ಕೆ ಬಂದಿದೆಯೇ?

ಆ) ಸದರಿ ಗೃಹ ನಿರ್ಮಾಣ ಸಂಘದವರು ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು ಅದರಲ್ಲಿ ನಿವೇಶನಗಳನ್ನು ಪಡೆದ ಹಳೆಯ ಸದಸ್ಯರುಗಳು ಮತ್ತು ಹೊಸ ಸದಸ್ಯರೇತರರುಗಳು ಎಷ್ಟು?

ಇ) ನಿಯಮ ಬಾಹಿರವಾಗಿ ಸದಸ್ಯರೇತರರಿಗೆ ನಿವೇಶನಗಳನ್ನು ಹಂಚಿರುವ ಈ ಗೃಹನಿರ್ಮಾಣ ಸಂಘದವರ ಮೇಲೆ ಕಾನೂನು ರೀತ್ಯಾ ಕ್ರಮಗಳನ್ನು ಸರಕಾರ ಜರುಗಿಸುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಇಲ್ಲಾ

ಆ) 120 ನಿವೇಶನಗಳನ್ನು ಸಂಘ ಹಂಚಿರುತ್ತದೆ. ಹೊಸ ಸದಸ್ಯರೇತರರಿಗೆ ಹಂಚಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 23.3.94ರಂದು ವಿಧಾನಸಭೆಯಲ್ಲಿ ಪ್ರಶ್ನೋತ್ತರಗಳು ನಡೆಯದ ಕಾರಣ ಆ ದಿನದ 11ನೇ ಪಟ್ಟಿಯ ಚುಕ್ಕೆ ಗುರುತಿನ

19 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಚುಕ್ಕೆ ಗುರುತಿಲ್ಲದ 18 ಪ್ರಶ್ನೆಗಳ ಉತ್ತರಗಳನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

23-3-94ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಹೊಳೆನರಸೀಪುರದಲ್ಲಿರುವ ಪದವಿಪೂರ್ವ ಕಾಲೇಜುಗಳು

544 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿರತಕ್ಕ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) 1993-94ರಲ್ಲಿ ಆ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವಕಾಲೇಜುಗಳನ್ನು ತೆರೆಯಲಾಗಿದೆ.

ಇ) 1994-95ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲಾಗುವುದು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿ ಒಟ್ಟು 5 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇರುತ್ತವೆ.

ಆ) 1993-94ರಲ್ಲಿ ಆ ತಾಲ್ಲೂಕಿನಲ್ಲಿ ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಿರುವುದಿಲ್ಲ.

ಇ) 1994-95ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾವನೆ ಬಂದಿರುವುದಿಲ್ಲ. ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಮಾಟೋಳ್ಳಿ ಮತ್ತು ಎಕ್ಕುಂಡಿ ಗ್ರಾಮಗಳಲ್ಲಿ ಮೀನುಗಾರರಿಗೆ ಮನೆಗಳ ನಿರ್ಮಾಣ

516 - ಶ್ರೀ ಶಿವಾನಂದ ಪಟ್ಟಣಶೆಟ್ಟಿ (ಬೈಲಹೊಂಗಲ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರು ಹಾಗೂ ಸೌದತ್ತಿ ತಾಲ್ಲೂಕಿನ ಮಾಟೋಳ್ಳಿ ಮತ್ತು ಎಕ್ಕುಂಡಿ ಗ್ರಾಮಗಳಲ್ಲಿ ಮೀನುಗಾರರು ಮನೆಗಳನ್ನು ಕಟ್ಟುವ ಸಲುವಾಗಿ ಸೊಸೈಟಿ ಮುಖಾಂತರ ಸ್ಥಳವನ್ನು ಸರ್ಕಾರಕ್ಕೆ ಒದಗಿಸಿದ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ ಆ ಮೀನುಗಾರರಿಗೆ ಮನೆಗಳನ್ನು ಕಟ್ಟಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಇ) ಇನ್ನು ಎಷ್ಟು ದಿವಸಗಳಲ್ಲಿ ಅವರಿಗೆ ಮನೆಗಳನ್ನು ಕಟ್ಟಲು ಕ್ರಮಕೈಗೊಳ್ಳಲಾಗುವುದು?

ಈ) ಸೊಸೈಟಿ ಮುಖಾಂತರ ಎಷ್ಟು ಜನ ಮೀನುಗಾರರ ಸ್ಥಳವನ್ನು ಸರ್ಕಾರಕ್ಕೆ ಮನೆಕಟ್ಟಲು ಕೊಟ್ಟಿರುವರು (ಅವರ ಹೆಸರುಗಳನ್ನು ವಿವರವಾಗಿ ನೀಡುವುದಾಗಬೇಕು)

ಉ) ಸರ್ಕಾರದ ನಿರ್ಲಕ್ಷತನದಿಂದ ಅಲ್ಲಿ ಮನೆಗಳನ್ನು ಕಟ್ಟಲು ವಿಳಂಬವಾಗುತ್ತಿದೆಯೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?